(ಸಭಾಧ್ಯಕ್ಷರು (ಶ್ರೀ ರಮೇಶ್ ಕುಮಾರ್)ರವರು ಪೀಠವನ್ನಲಂಕರಿಸಿದ್ದರು).

2. **ರಾಜ್ಯಪಾಲರ ಭಾಷಣದ ಮಂಡನೆ**

ಸಭಾಧ್ಯಕ್ಷರು:- ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು.

ಕಾರ್ಯದರ್ಶಿಗಳು:- ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು:- ರಾಜ್ಯಪಾಲರ ಭಾಷಣದ ಪ್ರತಿಯನ್ನು ಸಭೆಯ ಮುಂದಿಡಲಾಯಿತು.

3. **ಸಂತಾಪ ಸೂಚನೆಗಳು**

ಸಭಾಧ್ಯಕ್ಷರು:-

ಹತ್ತನೇ ವಿಧಾನ ಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಎನ್. ಬಸವಯ್ಯ ಶ್ರೀ ಪೂರ್ಣಮುತ್ತಪ್ಪ, ವಿಧಾನ ಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀಯುತ ಕೆ.ಎಫ್ ಪಾಟೀಲ್, ಡಾ: ಕೆ. ನಾಗಪ್ಪ ಆಳ್ವ, ಜಗನ್ನಾಥರಾವ್ ಚಂಡ್ರಿಕೆ, ಐ.ಪಿ.ಡಿ. ಸಾಲಪ್ಪ, ಜಿ. ಶಿವಲಿಂಗಪ್ಪ, ಜಿ.ಎಸ್. ಬಾಗಲಕೋಟ್, ಡಿ.ಟಿ. ರಾಮು, ಆರ್.ಎಸ್. ಸಿದ್ಧರಾಮಯ್ಯ ಹಾಗೂ ಎ. ಶರಣಪ್ಪ ಅವರುಗಳು ನಿಧನರಾದುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

1. ಹತ್ತನೇ ವಿಧಾನ ಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಎನ್. ಬಸವಯ್ಯ ಅವರು ದಿನಾಂಕ 27-9-1996 ರಂದು ನಿಧನರಾದರು. ಶ್ರೀಯುತರು ಐದು ಮತ್ತು ಆರನೇ ವಿಧಾನ ಸಭೆಯ ಸದಸ್ಯರಾಗಿ, 1979 ರಿಂದ 1980 ರವರೆಗೆ ಭಾರಿ ಮತ್ತು ಮಧ್ಯಮ ನೀರಾವರಿ ರಾಜ್ಯ ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದರು. ಅವರು ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಶ್ರೀಯುತರು ಮೂರು ವರ್ಷಗಳ ಕಾಲ ಚಿಕ್ಕನಾಯಕನಹಳ್ಳಿ ಪುರಸಭಾಧ್ಯಕ್ಷರಾಗಿ, ನಾಲ್ಕು ವರ್ಷ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ, ಜಿಲ್ಲಾ ಬ್ಯಾಂಕ್ ಉಪಾಧ್ಯಕ್ಷರಾಗಿ ಹಾಗೂ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿದ್ದರು.

2. ಹತ್ತನೇ ವಿಧಾನ ಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಪೂರ್ಣಮುತ್ತಪ್ಪ ಅವರು ದಿನಾಂಕ 20-1-1997 ರಂದು ನಿಧನರಾದರು. ಕೃಷಿಕ ಕುಟುಂಬದಿಂದ ಬಂದಿದ್ದ ಶ್ರೀಯುತರು ಎಂಟನೇ ವಿಧಾನ ಸಭೆಯ ಸದಸ್ಯರಾಗಿ, ಸಮಾಜ ಸೇವಕರಾಗಿ ಸೇವೆ ಸಲ್ಲಿಸಿದ್ದರು. ಚಳ್ಳಕೆರೆ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

3. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ.ಎಫ್. ಪಾಟೀಲ್ ಅವರು ದಿನಾಂಕ 27-8-1996 ರಂದು ನಿಧನರಾದರು. ಸ್ವಾತಂತ್ರ್ಯ ಹೋರಾಟಗಾರರಾಗಿ ಜೈಲು ವಾಸ ಅನುಭವಿಸಿದ್ದ ಶ್ರೀಯುತರು 1946 ರಲ್ಲಿ ಬಾಂಬೆ ಶಾಸನ ಸಭೆಗೆ ಧಾರವಾಡ ದಕ್ಷಿಣ ಕ್ಷೇತ್ರದಿಂದ